# ಡಿಂಡಿಮ DINDIMA

ವಿದ್ಯಾರಣ್ಯ ಕನ್ನಡ ಕೂಟದ ತ್ರೈಮಾಸಿಕ ಪತ್ರಿಕೆ • A quarterly newsletter of Vidyaranya Kannada Kuta

ಸಂಪುಟ ೫ • ಸಂಚಿಕೆ ೪ http://www.VidyaranyaKannadaKuta.org ಅಕ್ಟೋಬರ್ – ಡಿಸೆಂಬರ್ ೨೦೧೧ ಹೇಮಂತ

ಬಾ ಇಲ್ಲಿ, ಬಾ ಇಲ್ಲಿ ಕನ್ನಡಿಗ, ಬಾ ಇಲ್ಲಿ, ನಿನ್ನವರೆಂಬುವರಿಹರು ಇಲ್ಲಿ! ಮಾತಾಡುವರು ಕನ್ನಡದಲ್ಲಿ!

*ಹೇಮಂತ ಋತುರಾಜನಿಳೆಗೆ ಬಂದಿಳಿವಂದು,*
*ಹೂವಿಲ್ಲ ಹಸುರಿಲ್ಲ ಚಿಗುರೆಲೆಗಳಿಲ್ಲ,*
*ದುಂಬಿಗಳ ದನಿಯಿಲ್ಲ ಹಕ್ಕಿಗಳ ಹಾಡಿಲ್ಲ,*
*ಕುಸುಮ ಗಂಧವ ತರುವ ಮರುತನಿಲ್ಲ.*

ಆದರೂ,

ಆದರೂ ಓದಲು
*ಡಿಂಡಿಮ ಇದೆ!*

# ಡಿಂಡಿಮ DINDIMA

ವಿದ್ಯಾರಣ್ಯ ಕನ್ನಡ ಕೂಟದ ತ್ರೈಮಾಸಿಕ ಪತ್ರಿಕೆ • A quarterly newsletter of Vidyaranya Kannada Kuta

ಸಂಪುಟ ೫ • ಸಂಚಿಕೆ ೪ http://www.VidyaranyaKannadaKuta.org ಅಕ್ಟೋಬರ್ – ಡಿಸೆಂಬರ್ ೨೦೧೧ ಹೇಮಂತ


ಬಾ ಇಲ್ಲಿ, ಬಾ ಇಲ್ಲಿ ಕನ್ನಡಿಗ, ಬಾ ಇಲ್ಲಿ, ನಿನ್ನವರೆಂಬುವರಿಹರು ಇಲ್ಲಿ! ಮಾತಾಡುವರು ಕನ್ನಡದಲ್ಲಿ!

## ಸವಿನೆನಪಿನ ಪುಟ ಸೇರಿದ ಸೊಗಸಿನ ದೀಪಾವಳಿ ವರದಿ: ತ್ರಿವೇಣಿ ಶ್ರೀನಿವಾಸರಾವ್

ನವೆಂಬರ್, ೧೨, ೨೦೧೧ರ ಶನಿವಾರ, ವಿದ್ಯಾರಣ್ಯ ಕನ್ನಡಕೂಟದ ದೀಪಾವಳಿ ಮತ್ತು ಕನ್ನಡ ರಾಜ್ಯೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು. ಸಂಜೆ ಐದರ ಹೊತ್ತಿಗೆ ಸದಸ್ಯರು ಗುಂಪುಗುಂಪಾಗಿ ಬಂದು ಸೇರತೊಡಗಿದರು. ಎಷ್ಟು ಬೆಲೆಬಾಳುವ ಬಟ್ಟೆ ಕೊಂಡರೂ, ನನ್ನ ಕಣ್ಣಿಗಂತೂ ಕಣ್ಣಿಗೆ ಒಂದೇ ರೀತಿ ಕಾಣಿಸುವ ಪ್ಯಾಂಟು-ಶರ್ಟಿಗೆ ಅಂದು ಹಬ್ಬದ ರಜೆ ಇದ್ದಂತಿತ್ತು! ಗರಿಗರಿ ಧೋತಿ-ಜುಬ್ಬಾ, ಪೈಜಾಮ-ಕುರ್ತಾ, ಶೇರವಾನಿ ಧರಿಸಿ, ಹೆಗಲ ಮೇಲೊಂದು ಉತ್ತರೀಯದಂತಹ ವಸ್ತ್ರವನ್ನು ಸಲ್ಮಾನ್‌ಖಾನನಂತೆ ತೂಗುಬಿಟ್ಟ ಪುರುಷರು, ಅಂದ-ಚಂದದ ರೇಷ್ಮೆಸೀರೆಗಳ ಸೊಬಗನ್ನು ತಮ್ಮ ಚೆಲುವಿನಿಂದ ಮತ್ತಷ್ಟು ಹೆಚ್ಚಿಸಿದ್ದ ಲಲನೆಯರು, ಪುಟುಪುಟು ನಡೆಯುತ್ತಿದ್ದ ಚೂಟಿ-ಚುರುಕು ಮಕ್ಕಳು! ರೇಷ್ಮೆಸೀರೆಗಳ ಬೆಲೆ ಎಷ್ಟಾದರೂ ಮೇಲೆ ಹೋಗಲಿ, ಅದು ಸಮಾರಂಭಕ್ಕೆ ಕೊಡುವ ವೈಭವದ ಸ್ಪರ್ಶಕ್ಕೆ ಬೆಲೆ ಕಟ್ಟಲು ಸಾಧ್ಯವಿದೆಯೇ? ಒಟ್ಟಿನಲ್ಲಿ, ಎಲ್ಲೆಡೆ ಲವಲವಿಕೆ, ಎಲ್ಲರ ವದನಗಳಲ್ಲೂ ಇಡೀ ದಿನ ಉರಿಯಲೆಂದು ಹಚ್ಚಿಟ್ಟ ತಿಳಿನಗುವಿನ ಸಿರಿಹಣತೆ!



ಸಮಯಕ್ಕೆ ಸರಿಯಾಗಿ ಅರ್ಚಕರಿಂದ ಲಕ್ಷ್ಮೀಪೂಜೆ ಪ್ರಾರಂಭವಾಯಿತು. ಕೆಲವರಿಗೆ ಎಲ್ಲ ಮರೆತು ನಡೆ-ಯುತ್ತಿರುವ ಪೂಜಾವಿಧಿಗಳಲ್ಲಿ ತಲ್ಲೀನರಾಗುವ ಬಯಕೆಯಾದರೆ, ಉಳಿದವರಿಗೆ ಬಹುದಿನಗಳ ನಂತರ ಭೇಟಿಯಾಗುತ್ತಿರುವ ಸ್ನೇಹಿತರೊಡನೆ ಪಿಸುನುಡಿಯಲ್ಲಿ ಕುಶಲವಾಡುವ ತವಕ. ಪೂಜೆ ಮುಗಿದೊಡನೆ, ಈಗ ಕೆಲವು ವರ್ಷಗಳಿಂದ ಪ್ರಾರಂಭವಾಗಿರುವ ಹೊಸ ರೂಢಿಯಂತೆ ಸಂಜೆ ಭೋಜನ. ಇಲ್ಲಿ ಭೋಜನಕ್ಕಿಂತ ಮಾತುಕಥೆಗೆ ಹೆಚ್ಚು ಪ್ರಾಶಸ್ತ್ಯ. ಗುಂಪಾಗಿ, ಊಟದ ಮೇಜುಗಳಲ್ಲಿ ಕಲೆತು ಮಾಡುವ ಸಲ್ಲಾಪಕ್ಕೆ, ಸವಿಯೂಟದ ಸಾಥ್ ಕೂಡ ದೊರೆತ ಮೇಲೆ ಮತ್ತೆ ಹೇಳುವುದೇನಿದೆ? ಆದರೆ, ಎಲ್ಲರೂ ಘಂಟೆಗಟ್ಟಲೆ ಹರಟುತ್ತಾ ಊಟ ಮಾಡುತ್ತಾ ಕೂತರೆ, 'ಸಮಾರಥಿ' ಸಮಾರಂಭದಲ್ಲಿ ನಡೆಯಬೇಕಾದ ಕಾರ್ಯಕ್ರಮದ ಗತಿಯೇನೆಂದು ಹೆದರಿ, ದತ್ತ ಅಜ್ಜಂಪುರ, ರಾಮರಾವ್, ಅಶೋಕ್ ಕೌಡ್ಲೆ ಮತ್ತಿತರರು ಮೈಕು ಹಿಡಿದು, ಸದಸ್ಯರೆಲ್ಲಾ ಆದಷ್ಟು ಬೇಗ ಊಟ ಮುಗಿಸಿ, ಸಭಾಂಗಣಕ್ಕೆ ಹೋಗಬೇಕೆಂದು ಪರಿಪರಿಯಾಗಿ ವಿನಂತಿಸಿಕೊಳ್ಳುತ್ತಿದ್ದ ದೃಶ್ಯವೂ ಕಣ್ಣಿಗೆ ಬಿತ್ತು.

ಸದಸ್ಯರೆಲ್ಲರೂ ಸಭಾಂಗಣದಲ್ಲಿ ಆಸೀನರಾದ ಮೇಲೆ ಪ್ರಾರ್ಥನೆ, ರಾಷ್ಟ್ರಗೀತೆ, ನಾಡಗೀತೆಗಳೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ. ಇದರ ನಂತರ ವಾರ್ಷಿಕ ಸರ್ವ ಸದಸ್ಯರ ಸಭೆ. ಸಾಮಾನ್ಯ ಸದಸ್ಯರಿಗೆ ಆಸಕ್ತಿ ಮೂಡಿಸದ ಕಲಾಪವಾದರೂ, ಸಂಘದ ಸಂವಿಧಾನದನ್ವಯ ನಡೆಸಲೇಬೇಕಾದ ಅನಿವಾರ್ಯ ವಿಧಿ! ಅಧ್ಯಕ್ಷ ಸತೀಶ್ ಗೋಪಿನಾಥ್ ನಾಯಕತ್ವದಲ್ಲಿ ಕೂಟ-ದಲ್ಲಿ ನಡೆದ ಕಾರ್ಯಕ್ರಮಗಳು, ಸಾಧನೆಗಳು, ಖರ್ಚು-ವೆಚ್ಚಗಳ ಬಗೆಗೆ ಸಭೆಗೆ ಮಾಹಿತಿ ನೀಡಲಾಯಿತು. ಕೂಟದ ಸದಸ್ಯತ್ವ ಈ ಬಾರಿ ದಾಖಲೆ ಸಂಖ್ಯೆಗೇರಿದ ಸಂತಸವನ್ನು ಸದಸ್ಯರೊಡನೆ ಹಂಚಿಕೊಳ್ಳಲಾಯಿತು. ಇಲಿನಾಯ್ ವಲಯದಲ್ಲಿರುವ ಕನ್ನಡಿಗರ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ, ಈ ಮೊತ್ತ ಅತ್ಯಲ್ಪವೆಂದೂ, ಮುಂಬರುವ ದಿನಗಳಲ್ಲಿ ಸದಸ್ಯತ್ವವನ್ನು ಹೆಚ್ಚಿಸಲು ಮತ್ತಷ್ಟು ಪ್ರಯತ್ನಗಳು ನಡೆಯಬೇಕೆಂದೂ ಅಭಿಪ್ರಾಯ ವ್ಯಕ್ತವಾಯಿತು. ನಂದೀಶ್ ಧನಂಜಯ ಅವರು ಅವಿರೋಧವಾಗಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಲ್ಲದೆ, ದತ್ತಿ ನಿಧಿ, ಚುನಾವಣೆ, ಲೆಕ್ಕಪತ್ರ ತನಿಖೆ ಸಮಿತಿಗಳನ್ನು ಚುನಾಯಿಸಲಾಯಿತು. ಸಾಮಾನ್ಯವಾಗಿ ಇಂತಹ ಸಭೆಗಳೆಂದರೆ ಸರ್ವಂ ಆಂಗ್ಲ ಮಯಂ! ಆದರೆ, ಈ ಸಲ ಕರಿಮಣಿ ಸರದಲ್ಲಿ ಕೆಂಪು ಹವಳ ಮೆರೆದಂತೆ, ಕನ್ನಡದಲ್ಲಿ ಭಾಷಣಗಳು, ವರದಿಗಳು ಮಂಡನೆಯಾಗಿದ್ದು ಮನ ಮುದಗೊಳಿಸಿದ ವಿಚಾರ.




**ಸವಿನೆನಪಿನ ಪುಟ** ಮುಂದುವರೆದುದು (ನಾಲ್ಕನೇ ಪುಟ ನೋಡಿ)


### ಈ ಸಂಚಿಕೆಯಲ್ಲಿ


೧ ವರದಿ – ಸೊಗಸಿನ ದೀಪಾವಳಿ
೨ ಸಂಪಾದಕೀಯ
೨ ನಲ್ಮೆಯ ನುಡಿ
೩ ಕನ್ನಡಕೂಟ– ೨೦೧೨ ರ ಸಮಿತಿಗಳು
೫ ದೀಪಾವಳಿಯ ಚಿತ್ರಗಳು
೮ ಆಶುಕವಿತೆ
೯ ಆಶುಕವಿತೆ
೧೦ ಸಂಗಮ ಸಂಚಿಕೆಯ ವಿಚಾರಗಳು
೧೧ ಕವಿತೆ
೧೨ ಹೊಸ ವಿಷಯ
೧೩ ಛಾಯಚಿತ್ರ ವಿಭಾಗ
೧೪ ಕೊನರು ಮಕ್ಕಳ ದಳ


Inside this issue

# ಸಂಪಾದಕೀಯ

*ಹೇಮಂತ ಋತುರಾಜನಿಳೆಗೆ ಬಂದಿಳಿವಂದು,*
*ಹೂವಿಲ್ಲ ಹಸುರಿಲ್ಲ ಚಿಗುರೆಲೆಗಳಿಲ್ಲ,*
*ದುಂಬಿಗಳ ದನಿಯಿಲ್ಲ ಹಕ್ಕಿಗಳ ಹಾಡಿಲ್ಲ,*
*ಕುಸುಮ ಗಂಧವ ತರುವ ಮರುತನಿಲ್ಲ.*

- ಎಸ್. ವಿ. ಪರಮೇಶ್ವರ ಭಟ್ಟ

ಆತ್ಮೀಯ ಓದುಗರೆ,

ಹೇಮಂತನಿಳೆಗಿಳಿದು ಬಂದಿರುವುದನ್ನು ಕಾಣುತ್ತಿರುವಾಗ ತಮ್ಮ ಮುಂದೆ ೨೦೧೧ರ ಕೊನೆಯ ಕಂತಿನ ಈ ಡಿಂಡಿಮವನ್ನು ಅರ್ಪಿಸುತ್ತಿದ್ದೇವೆ.

ಈ ವರ್ಷದ ಡಿಂಡಿಮದ ಭಾಗವಾಗಿ ಕಲಿಯಲು ನಮಗೆ ಅವಕಾಶಕೊಟ್ಟ ವಿದ್ಯಾರಣ್ಯ ಕನ್ನಡಕೂಟದ ಅಧ್ಯಕ್ಷ ಸತೀಶ್ ಗೋಪಿನಾಥರಿಗೆ ನಮ್ಮ ವಂದನೆಗಳು.

ಡಿಂಡಿಮದ ಪ್ರಕಟನೆಗೆ ನಮಗೆ ಪ್ರೋತ್ಸಾಹ ನೀಡಿ, ಸಹಾಯ ಮಾಡಿದ ಅರುಣ್ ಮೂರ್ತಿ ಮತ್ತು *"ಹುರುಪಿನ ಹುಡುಗ"* ಅಶೋಕ್ ಕೌಟ್ಲೆ ಅವರನ್ನು; ಡಿಂಡಿಮ ಅಂದವಾಗಿ ಕಾಣಲು ಆ ಕ್ಷಣಗಳನ್ನು ಚಂದದ ಚಿತ್ರಗಳಾಗಿ ಸೆರೆಯಿಡಿದ "ಶ್ರೀನಿ" ಯವರನ್ನು ಮರೆಯದಿರುವ ಹಾಗಿಲ್ಲ.

ಡಿಂಡಿಮ ನಿರಂತರ ನಡೆಯಲು ಕಾರಣ, ನಮ್ಮ ಬರಹಗಾರರು ಮತ್ತು ನೀವು; ನಮ್ಮ ಓದುಗರು. ನಿಮಗೆ ನಮ್ಮ ವಂದನೆಗಳು. ಮುಂದೆಯೂ ನೀವು ನಿಮ್ಮ ಆಲೋಚನೆಗಳನ್ನು ಹರಿಬಿಡದೆ ಕೃತಿಯಾಗಿಡಿಸಿ ಡಿಂಡಿಮವನ್ನು ಸಮರ್ಥಿಸುವಿರೆಂದು ಆಶಿಸುತ್ತೇವೆ.

೨೦೧೨ ರ ಡಿಂಡಿಮ ಸಮಿತಿಗೆ, ನಮ್ಮ ಬರಹಗಾರರಿಗೆ, ಮತ್ತು ಓದುಗರಿಗೆ ಸಂತಸದ ೨೦೧೨ನ್ನು ಹಾರೈಸುವ,

ಡಿಂಡಿಮ ಸಂಪಾದಕೀಯ ಸಮಿತಿ.


**ಡಿಂಡಿಮ** ಸಂಪುಟ ೫ • ಸಂಚಿಕೆ ೪

**DINDIMA, a quarterly newsletter, is brought to the members of Vidyaranya Kannada Kuta (VKK). It includes news and reports about the proceedings and activities at VKK. It also provides a platform for members to present and share their creative work and other useful information with other members.**

*Dindima is published by the Dindima Committee of Vidyaranya Kannada Kuta*

Editors: B. Indusekar, Rajeev Kumar & Kanaka Tirumale



*The views and opinions expressed herein are those of the respective authors. They do not reflect the views and opinions of the Editors of Dindima or the Executive Committee members of Vidyaranya Kannada Kuta.*



**Contact Email:**
*dindima@vidyaranyakannadakuta.org*


**Visit us online at:**
*http://www.vidyaranyakannadakuta.org/dindima.html*

*http://www.facebook.com/pages/Dindima/220718177773*

*http://www.issuu.com/dindima*

## ಹಾರೈಕೆ: "೨೦೧೧ ರಿಂದ ೨೦೧೨ ಕ್ಕೆ"

ವಿದ್ಯಾರಣ್ಯ ಕನ್ನಡ ಕೂಟದ ಇಸವಿ ೨೦೧೧ ರ ಕಾರ್ಯಕ್ರಮಗಳು ಶ್ರೀಯುತ ಸತೀಶ್ ಗೋಪಿನಾಥ್ ರವರ ಅಧ್ಯಕ್ಷತೆಯಲಿ ಅಧಿಕೃತ ಕಾರ್ಯಕಾರಿ ತಂಡದವರ ಸಹಕಾರದಿಂದ ಚೆನ್ನಾಗಿ ಕೂಡಿ ಬಂತು ಹಾಗು ಮೂಡಿ ಬಂತು. ಈ ಯಶಸ್ವೀ ವರುಷಕ್ಕೆ ಕಾರಣ, ಸತೀಶ್ ರವರು. ಇವರು ಒಂದು ಕೆಲಸ ಅಥವಾ ಕಾರ್ಯ ಎಷ್ಟೇ ದೊಡ್ಡದಿದ್ದರೂ, ಅದರ ಗಾತ್ರವನ್ನು ತಗ್ಗಿಸಿ, ಒಂದು ಸಣ್ಣದಾದ ಗಾತುರಕ್ಕೆ ತಂದು, ಆ ಗಾತುರವನ್ನು ಒಂದು ಬಿಂದುವಾಗಿಸಿ, ಆ *"ಬಿಂದು"* ವಿನಲ್ಲಿ ತಮ್ಮೆಲ್ಲಾ ಗಮನವನ್ನು ಕೇಂದ್ರೀಕರಿಸಿ, ಆ ಒಂದು ಕಾರ್ಯವನ್ನ ಯಶಸ್ವಿಯಾಗಿಸುವ ಚಾಕಚಕ್ಯತೆಯುಳ್ಳವರು.

೩೮ ವರುಷದ ವಿದ್ಯಾರಣ್ಯ ಕನ್ನಡ ಕೂಟದ ಬೆಳವಣಿಗೆಯಲ್ಲಿ ಸೇವೆ ಮಾಡಿದ ಎಲ್ಲಾ ಅಧ್ಯಕ್ಷರುಗಳು, ಮಹತ್ತರವಾದ ಕೆಲಸ ಮಾಡಿ, ಕನ್ನಡಕ್ಕೆ ಮತ್ತು ಕನ್ನಡಿಗರಿಗೆ ಆಶ್ರಯದ ಮರವಾಗಿಸಿ ಮೆಚ್ಚುಗೆ ಗಳಿಸಿದ್ದಾರೆ.



ಮುಂಬರುವ ವರುಷದಲ್ಲಿ ಈ ಕೂಟಕ್ಕೆ ಇನ್ನೂ ಹೆಚ್ಚಿನಾ ಮೆರುಗು *"ನೀ ತಾ"* ಧನಂಜಯ ಎಂದು ಹಾರೈಸುವ

**ಲಕ್ಷ್ಮಣ್ ಮಿಟ್ಟೂರ್**

## ನಲ್ಮೆಯ ನುಡಿ

ವಿದ್ಯಾರಣ್ಯ ಕನ್ನಡ ಕೂಟದ ಸದಸ್ಯರೆಲ್ಲರಿಗೂ ಹೊಸ ವರ್ಷದ ಹಾರ್ದಿಕ ಶುಭಾಶಯಗಳು.

ನಿಮ್ಮೆಲ್ಲರ ಸಹಕಾರದಿಂದ ೨೦೧೧ರ ಕನ್ನಡ ಕೂಟದ ಕಾರ್ಯಕ್ರಮಗಳು ಕನ್ನಡಿಗರಿಗೆ ಒಂದೆಡೆ ಸೇರಲು ಹಾಗೂ ಸಂಭ್ರಮದ ಆಚರಣೆಗೆ ಅವಕಾಶ ಮಾಡಿಕೊಟ್ಟಿವೆ.

ಕಳೆದ ೩೮ ವರ್ಷದಿಂದ ಕನ್ನಡ ನಾಡಿನ ಮಹತ್ವವನ್ನು ಹಾಗೂ ಕನ್ನಡ ಭಾಷೆಯನ್ನು ಸಾರುವಲ್ಲಿ ವಿದ್ಯಾರಣ್ಯ ಕನ್ನಡ ಕೂಟವು ತನ್ನ ಪ್ರಯತ್ನವನ್ನು ಮುಂದುವರೆಸಿಕೊಂಡು ಬಂದಿದೆ. ಕೇವಲ ಕೆಲವು ಕನ್ನಡಿಗರಿಂದ ಪ್ರಾರಂಭವಾದ ಕನ್ನಡ ಕೂಟವು ಇಂದು ಹೆಮ್ಮರವಾಗಿ ಬೆಳೆದು ನಿಂತಿದೆ. ಈ ಹೆಮ್ಮರವು ನಮ್ಮ ನಾಡಿನ ಸಂಸ್ಕೃತಿ ಹಾಗೂ ಪರಂಪರೆಯನ್ನು ಮುಂದುವರೆಸಲು ಆಶ್ರಯವಾಗಲಿ ಎಂದು ಆಶಿಸುತ್ತೇನೆ.

ಕನ್ನಡ ಕೂಟಕ್ಕೆ ಈ ಹಾದಿಯಲ್ಲಿ ಸೇವೆ ಸಲ್ಲಿಸಲು ನನಗೆ ಸಿಕ್ಕ ಅವಕಾಶವು ನನ್ನ ಪುಣ್ಯ ಎಂದೇ ಹೇಳಬೇಕು. ಈ ಅವಕಾಶಗಳನ್ನು ಸಫಲಗೊಳಿಸುವಲ್ಲಿ ನನಗೆ ಸಿಕ್ಕ ನಿಮ್ಮೆಲರ ಸಹಾಯ ಹಾಗೂ ಪ್ರೋತ್ಸಾಹಕ್ಕೆ ನಾನು ಆಭಾರಿಯಾಗಿದ್ದೇನೆ. ಕನ್ನಡ ಕೂಟವು ಬೆಳೆಯುವುದಕ್ಕೆ ನಾವೆಲ್ಲರೂ ಕನ್ನಡ ಕೂಟದ ಯೋಜನೆ ಹಾಗೂ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಇತರ ಕನ್ನಡಿಗರಿಗೂ ಕನ್ನಡ ಕೂಟದ ಸದಸ್ಯತ್ವವನ್ನು ಸ್ವೀಕರಿಸಲು ಪ್ರೋತ್ಸಾಹಿಸಿ, ಕಾಲ ಕಾಲಕ್ಕೆ ನಮ್ಮ ಅಭಿಪ್ರಾಯವನ್ನು ಕಾರ್ಯಕಾರಿ ಸಮಿತಿಗೆ ತಿಳಿಸೋಣ. ೨೦೧೧ರ ಕಾರ್ಯಕ್ರಮಗಳನ್ನು ನಡೆಸಲು ಸಹಾಯ ಮಾಡಿದ ಎಲ್ಲಾ ವಿದ್ಯಾರಣ್ಣಿಗರಿಗೂ ನನ್ನ ವಂದನೆಗಳು.



೨೦೧೨ರ ಜವಾಬ್ದಾರಿಯನ್ನು ಹೊತ್ತ ನಂದೀಶ್ ಧನಂಜಯ ಕೆಲವು ವರ್ಷದಿಂದ ಕನ್ನಡ ಕೂಟದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅವರು ಈ ವರ್ಷದ ಕಾರ್ಯಕ್ರಮಗಳನ್ನು ವಿಜೃಂಭಣೆಯಿಂದ ನಡೆಸುತ್ತಾರೆಂದು ನನ್ನ ನಂಬಿಕೆ. ಬನ್ನಿ, ಅವರಿಗೆ ಮತ್ತು ಅವರ ಸಮಿತಿಗೆ ಸಹಾಯವನ್ನು ನೀಡೋಣ, ಕನ್ನಡ ಜ್ಯೋತಿಯನ್ನು ಬೆಳಗಿಸಲು ನಮ್ಮ ಅಳಿಲು ಸೇವೆಯನ್ನು ಮಾಡೋಣ.

**ಸತೀಶ್ ಗೋಪಿನಾಥ.**

# ಶುಭಾಶಯಗಳು

## ವಿದ್ಯಾರಣ್ಯ ಕನ್ನಡ ಕೂಟ
### ೨೦೧೨ ರ ಸಮಿತಿಗಳು

| | | |
|---|---|---|
| ಕಾರ್ಯಕಾರಿ ಸಮಿತಿ | ಅಧ್ಯಕ್ಷ | ನಂದೀಶ್ ಧನಂಜಯ |
| | ಉಪಾಧ್ಯಕ್ಷ | ರಮೇಶ್ ಟೀಕ |
| | ಕಾರ್ಯದರ್ಶಿ | ದೀಪಕ್ ಪಾಟೀಲ್ |
| | ಖಜಾಂಚಿ | ಶಂಕರ್ ಹೆಗ್ಡೆ |
| | ಉಪಕಾರ್ಯದರ್ಶಿ | ಅನಿತ ದಾಸಪ್ಪ |
| | ಉಪಖಜಾಂಚಿ | ಗಣಪತಿ ಭಟ್ |
| | ಭೋಜನ | ರಾಮರಾವ್ |
| | | ಕೌಶಿಕ್ ಭೂಪೇಂದ್ರ |
| | ನೋಂದಣಿ | ಶ್ರೀಷ ಜಯಸೀತಾರಾಂ |
| | ಸಾಂಸ್ಕೃತಿಕ | ಅನಿತ ದಾಸಪ್ಪ |
| | | ಪೂರ್ಣಿಮ ಚೊಲೆನಹಳ್ಳಿ |
| | | ಶೃತಿ ಕುಮಾರ್ |
| | ಮಿನ್ನೆಲೆ | ಅಶೋಕ್ ಕೌಡ್ಲೆ |
| ಲೆಕ್ಕ ಪರಿಶೋಧನೆ ಸಮಿತಿ | | ಕಜೇಕರ್ ರಾಮಚಂದ್ರ |
| | | ಅಶೋಕ್ ಕೊಲ್ಲುರು |
| | | ಪ್ರವೀಣ್ ಕುಮಾರ್ |
| ಚುನಾವಣೆ ಸಮಿತಿ | | ಗುರುದತ್ ರಾಮಮೂರ್ತಿ |
| | | ಸುನಿಲ್ ರಾವ್ |
| | | ಪ್ರಭು ಶಿವಲಿಂಗಪ್ಪ |
| ಧರ್ಮ–ದತ್ತಿ ಸಮಿತಿ | | ಆಶ ರಾವ್ |
| | | ರಾಜೀವ್ ಕುಮಾರ್ |
| | | ಅಪರಂಜಿ ಶ್ರೀರಮಣ |
| | | ಸುಜಾತ ದತ್ತಮೂರ್ತಿ |
| | | ಕೃಷ್ಣ ಮೋಹನ್ |
| | | ಅರುಣ್ ಶಿವಸ್ವಾಮಿ |
| | | ಪ್ರಸಾದ್ ನಾಗಮಂಗಲ |



**ನಂದೀಶ್ ಧನಂಜಯ**
ಅಧ್ಯಕ್ಷ, ವಿದ್ಯಾರಣ್ಯ ಕನ್ನಡಕೂಟ – ೨೦೧೨

**ಕಂಪ್ಯೂಟರ್ ರೂಪ ಚಿತ್ರಣ – ಅರುಣ್ ಮೂರ್ತಿ**

**ಕನ್ನಡ ಎಲ್ಲೂ ಇಲ್ಲ, ಇರುವುದೂ ಇಲ್ಲ. ಯಾರಾದರೂ ಕನ್ನಡವನ್ನು ಆಡಿದಾಗ, ಕೇಳಿದಾಗ, ಓದಿದಾಗ, ಬರೆದಾಗ ಮಾತ್ರವೇ ಅದು ಜೀವ ತಾಳುತ್ತದೆ. ಕನ್ನಡ ಹಾಗೆ ಜೀವ ತಾಳುವುದಕ್ಕೆ ಅವಕಾಶ ಕೊಡಬೇಕಾದವರು ನಾನು, ನಾವು, ನೀವು. ಅಭಿಮಾನದಿಂದ ಅಲ್ಲ, ದುರಭಿಮಾನದಿಂದ ಅಲ್ಲ, ಹಠದಿಂದ ಅಲ್ಲ, ಅಳುಕಿನಿಂದ ಅಲ್ಲ. ನಿರಾತಂಕವಾಗಿ, ಸಹಜವಾಗಿ ಅದನ್ನು ಬಳಸುವ ಮೂಲಕ. ಕನ್ನಡಕ್ಕೆ ಅಡ್ಡಿ ನಮ್ಮ ಮನಸ್ಸುಗಳಲ್ಲೇ ಇದೆ. ಅದು ತೊಲಗಲಿ.**

– ಓ. ಎಲ್. ನಾಗಭೂಷಣಸ್ವಾಮಿ

## ಸವಿನೆನಪಿನ ಪುಟ (ಒಂದನೇ ಪುಟದಿಂದ)

ನಂತರದ್ದೆಲ್ಲ ಸಾಲುಸಾಲು ಮನ ಸೆಳೆಯುವ ಹಾಡು-ನೃತ್ಯಗಳ ರಸಧಾರೆ. ಲಕ್ಷ್ಮೀಶಾಸ್ತ್ರಿ ಮತ್ತು ವೈಭವ್ ಶಾಸ್ತ್ರಿಯವರ ಕುಚಿಪುಡಿ ನೃತ್ಯ 'ತರಂಗಂ', ಕುಸುಮ ಇಂದುಶೇಖರ್ ಸಂಯೋಜನೆಯಲ್ಲಿ ಮೂಡಿದ 'ಸಾವಿರ ದಳ ಕಮಲಿನಿ' ವೃಂದಗಾನದ ನಂತರ ನಡೆದ 'ಸ್ಯಾಂಡಲ್ ವುಡ್'ಗೆ ಕಾಣಿಕೆ' ಕಾರ್ಯಕ್ರಮದಲ್ಲಿ, ಅಧ್ಯಕ್ಷ ಸತೀಶ್ ಗೋಪಿನಾಥ್ ಅವರೂ ಉತ್ಸಾಹದಿಂದ ಹೆಜ್ಜೆ ಹಾಕಿ ಸಹಚರರಿಗೆ ಉತ್ಸಾಹ ತುಂಬಿದರು. ಡಾ. ರಾಜ-ಕುಮಾರ್, ವಿಷ್ಣುವರ್ಧನ್, ಶಂಕರನಾಗ್, ರವಿಚಂದ್ರನ್, ಅಂಬರೀಷ್, ಶಿವರಾಜ್ ಕುಮಾರ್ ಇತ್ಯಾದಿ ಗಂಧದಗುಡಿಯ ಮೇರುನಟರನ್ನೆಲ್ಲ ನೆನಪಿಸಿದ ಈ ನೃತ್ಯಕ್ಕೆ ಭರಪೂರ ಚಪ್ಪಾಳೆ, ಶಿಳ್ಳೆಗಳು ಸಿಕ್ಕಿದವು ಎಂದು ಹೇಳಬೇಕಾಗಿಯೇ ಇಲ್ಲ ತಾನೇ? ನಿಶಿತಾ ಕುಮಾರ್ ನಡೆಸಿಕೊಟ್ಟ ಮತ್ತೊಂದು ನೃತ್ಯದ ನಂತರ, ಗುಪ್ತವಾಗಿ ಅವಿತಿದ್ದ ಮುತ್ತುರತ್ನಗಳೆಲ್ಲ ವೇದಿಕೆ ಮೇಲೆ ಪ್ರತ್ಯಕ್ಷವಾದವು ; ಅಂದರೆ, ಅದು ಸುಜಾತ ದತ್ತ ನಿರ್ದೇಶನದ 'ಹಿಡನ್ ಜೆಮ್ಸ್' ಸಮೂಹಗಾನವೆಂದು ನಿಮಗೆ ಗೊತ್ತಾಗಿರಬೇಕು!





ನಮ್ಮ ವಿದ್ಯಾರಣ್ಯದ ಹೆಮ್ಮೆಯ ಕಾಣಿಕೆ – 'ಸಂಗಮ' ಬಿಡುಗಡೆ. ಸತೀಶ್ ಗೋಪಿನಾಥ್ 'ಭಾಗ್ಯದ ನಿಧಿ' ಮುಖಪುಟ ಹೊತ್ತ ಸಂಗಮವನ್ನು ಬಿಡುಗಡೆ ಮಾಡಿದರು. ಸಂಪಾದಕರಾದ ತ್ರಿವೇಣಿ ಶ್ರೀನಿವಾಸರಾವ್ ಮತ್ತು ಶ್ರೀನಿವಾಸರಾವ್ ಅವರು ವೇದಿಕೆಯಲ್ಲಿದ್ದು, ಮತ್ತೊಬ್ಬ ಸಂಪಾದಕರಾದ ಅನಿಲ್ ದೇಶಪಾಂಡೆಯವರು ಅನಿವಾರ್ಯ ಕಾರಣದಿಂದ ಹಾಜರಿರಲಿಲ್ಲ. 'ಬಿಸಿಲಾದರೇನು? ಮಳೆಯಾದರೇನು?' ಎಂದು ಕಳೆದ ಮೂವತ್ತೆರಡು ವರ್ಷಗಳಿಂದ ವರ್ಷಕ್ಕೆ ಎರಡು ಬಾರಿ ಹೊರಬರುತ್ತಿರುವ 'ಸಂಗಮ'ದ ಜೊತೆಗೆ ಅನೇಕ ಸಂಪಾದಕರ, ಬರಹಗಾರರ, ಪ್ರಾಯೋಜಕರ ದೊಡ್ಡ ಹಿಂಡೇ ಇದೆ. 'ಸಂಗಮ'ದ ಸಾಧನೆಯಲ್ಲಿ ಕೂಟದ ಅಧ್ಯಕ್ಷರ ಪಾಲೂ ಕಡಿಮೆಯಿಲ್ಲ. ಕಳೆದ ಕೆಲವು ವರ್ಷಗಳಿಂದಲೂ 'ಸಂಗಮ'ದ ಸಂಪಾದಕಿಯಾಗಿ ಕೆಲಸ ನಿರ್ವಹಿಸಿರುವ ನಾನು, ಎಂದಿನಂತೆ 'ನಾಲ್ಕು' ಮಾತಾಡುವ ಬದಲು, ನನಗೆ ಅವಕಾಶ ನೀಡಿದ ಎಲ್ಲಾ ಅಧ್ಯಕ್ಷರನ್ನು ವಂದಿಸುತ್ತಾ, ಕಿರುಕವನವನ್ನು ಪ್ರಸ್ತುತಪಡಿಸಿದೆ. ನನ್ನ ಕವನದಲ್ಲಿ ಹೆಸರಿಸದ, ಈ ಹಿಂದಿನ ಎಲ್ಲಾ ಅಧ್ಯಕ್ಷರಿಗೂ ಈ ಮೂಲಕ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಇದರ ನಂತರದ್ದು 'ರಾಜ್ಯೋತ್ಸವ ಪ್ರಶಸ್ತಿ' ವಿತರಣೆ. ಶ್ರೀಯುತರಾದ ಪ್ರಕಾಶ್ ಹೇಮಾವತಿ, ಬಿ.ಇಂದುಶೇಖರ್, ಶ್ರೀಮತಿ ರೋಹಿಣಿ ಉಡುಪ ಪ್ರಶಸ್ತಿ ಸ್ವೀಕರಿಸಿದರು. ಇವರಲ್ಲದೆ, ಸತೀಶ್ ಅಮೃತೂರ್, ವೇಲು ಚಾಮಿ, ವನಮೂರ್ತಿಯವರನ್ನು ಸನ್ಮಾನಿಸಿ, ವಿದ್ಯಾರಣ್ಯಕ್ಕೆ ಸಲ್ಲಿಸಿರುವ ಅವರ ಸೇವೆಯನ್ನು ಶ್ಲಾಘಿಸಲಾಯಿತು.

ಇದೇ ಹೊತ್ತಿನಲ್ಲಿ, ಸಭಾಂಗಣದಲ್ಲಿ ಉಂಟಾದ ವಿದ್ಯುತ್ ವ್ಯತ್ಯಯದಿಂದಾಗಿ ಕಾರ್ಯಕ್ರಮದಲ್ಲಿ ಅಡಚಣೆಯುಂಟಾಯಿತು. ಬಹಳ ಹೊತ್ತು ಕಾದರೂ ಸಮಸ್ಯೆ ಬಗೆಹರಿಯದಾದಾಗ, ಮಂದಬೆಳಕಿನಲ್ಲೇ ಕಾರ್ಯಕ್ರಮ ಮುಂದುವರೆಸುವ ನಿರ್ಧಾರಕ್ಕೆ ಬರಲಾಯಿತು. ಶೃತಿ ಕುಮಾರ್ ಸಂಯೋಜಿಸಿದ್ದ 'ಮಿಂಚಿನ ಚೆಲುವೆಯರು' ಮತ್ತು ಪವಿತ್ರ ಕೊಡಿಕಲ್ ಸಂಯೋಜನೆಯಲ್ಲಿ ಮೂಡಿ ಬಂದ 'ಥರ ಥರ ಒಂಥರ' ನೃತ್ಯಗಳು ಅದ್ಭುತವಾಗಿ ಮೂಡಿಬಂದವು. ಈ ನೃತ್ಯಗಳಿಗಾಗಿ ಬಹುದಿನಗಳ ತಯಾರಿ ನಡೆಸಿದ್ದ ಕಲಾವಿದರು ಬೆಳಕಿನ ಕೊರತೆಯಿದ್ದರೂ, ತಮ್ಮ ಪ್ರತಿಭೆಯ ಬೆಳಕಿನಲ್ಲೇ ಪ್ರಕಾಶಮಾನವಾಗಿ ಮಿಂಚಿ ಎಲ್ಲರ ತುಂಬು ಮೆಚ್ಚುಗೆಗೆ ಪಾತ್ರರಾದರು.

ಅಬ್ಬಾ ಅಂತೂ ಈಗ ಬಂತಪ್ಪ! ಎಲ್ಲರೂ ಕಾತುರದಿಂದ ಕಾಯುತ್ತಿದ್ದ ಅಂದಿನ ಸಮಾರಂಭದ ಹೈಲೈಟ್! ನಮ್ಮೆಲ್ಲರ ಅಚ್ಚುಮೆಚ್ಚಿನ ಕವಿ 'ಪುತಿನ' ಪುತ್ರಿ, ಶ್ರೀಮತಿ ಅಲಮೇಲು ಅಯ್ಯಂಗಾರ್ ರಚಿಸಿದ, ರಮೇಶ್ ರಂಗಶಾಮ್ ನಿರ್ದೇಶಿಸಿದ 'ಸಾಮರಸ್ಯಕ್ಕೊಂದು ಸಲಹೆ' ನಗೆನಾಟಕ. ಪಾತ್ರಧಾರಿಗಳ ಪಟ್ಟಿಯಲ್ಲಿದ್ದ ಹೆಸರುಗಳಾದರೋ ಒಬ್ಬರನ್ನೊಬ್ಬರು ನಟನೆಯಲ್ಲಿ ಮೀರಿಸುವವರದು! ಎಲ್ಲರೂ ನಮ್ಮ ವಿದ್ಯಾರಣ್ಯದ ಆಸ್ಥಾನ ಕಲಾವಿದರಾಗಿ ಪಳಗಿದವರು. ಅನುಪಮ ಮಂಗಳವೇಢೆ, ನಿತಿನ್ ಮಂಗಳವೇಢೆ, ಶ್ರೀಶ ಜೈ, ರಮೇಶ್ ರಂಗಶಾಮ್, ಬಿಂದು ಶಾಮಣ್ಣ, ಉಮಾ ರಾವ್ ಭಾಗವಹಿಸಿದ್ದ ನಾಟಕ ಸಭಿಕರನ್ನು ನಕ್ಕು ನಗಿಸಿತು. ವಿದ್ಯಾರಣ್ಯದ ಯುವ ಸದಸ್ಯೆ ಸ್ಮಿತಾ ಅಜ್ಜಂಪುರ ಸಹಜ, ಸುಂದರವಾಗಿ ಅಭಿನಯಿಸಿ ಎಲ್ಲರ ಮನಗೆದ್ದಳು. ಹೊತ್ತು ಬಹಳಾಗಿದ್ದರೂ ಜೋಕ್ ಜಲಪಾತದಲ್ಲಿ ಮಿಂದು ಮುಳುಗೇಳುತ್ತಿದ್ದ ಜನರಿಗೆ ಅದರ ಪರಿವೆ ಇದ್ದಂತಿರಲಿಲ್ಲ : ಬದಲಿಗೆ ಒಂದು ಉತ್ತಮ ನಾಟಕ ನೋಡಿದ ಖುಷಿ ನಮ್ಮೆಲ್ಲರದಾಗಿತ್ತು!



ವಂದನಾರ್ಪಣೆಯೊಂದಿಗೆ ಮುಕ್ತಾಯಗೊಂಡ ದೀಪಾವಳಿ ಸಂಭ್ರಮ ನಮ್ಮೆಲ್ಲರ ಸವಿನೆನಪಿನ ಪುಟಗಳಲ್ಲಿ ಶಾಶ್ವತವಾಗಿ ಸೇರಿಹೋಯಿತು. ಹಲವಾರು ಉತ್ತಮ ಕಾರ್ಯಕ್ರಮಗಳನ್ನು ನೀಡುವ ಮೂಲಕ ತಮ್ಮ ಅವಧಿಯನ್ನು ಯಶಸ್ವಿಯಾಗಿ ಮುಗಿಸಿದ ಸತೀಶ್ ಗೋಪಿನಾಥ್ ಮತ್ತು ಕಾರ್ಯಕಾರಿ ಸಮಿತಿಯ ಎಲ್ಲಾ ಸದಸ್ಯರಿಗೆ ಅಭಿನಂದನೆ ಹೇಳುತ್ತಾ, ಹೊಸ ಉತ್ಸಾಹದೊಂದಿಗೆ ಆಗಮಿಸುತ್ತಿರುವ ನಂದೀಶ್ ಧನಂಜಯ ಮತ್ತು ತಂಡಕ್ಕೆ ಶುಭ ಹಾರೈಸೋಣವೇ?

◆◆◆◆◆◆◆◆◆

## ನಗೆ ಬುಗ್ಗೆ

### ಪುರಾಣ

ಗಂಡ: ದಶರಥನಿಗೆ ಮೂರು ಹೆಂಡತಿಯರಿದ್ದರಂತೆ. ಆಹಾ! ನನಗೆ ಇನ್ನೂ ಎರಡು ಹೆಂಡತಿಯರು ಮಾಡಿಕೊಳ್ಳುವ ಅವಕಾಶವಿದೆ!! ಏನು ಹೇಳುತ್ತೀಯ?

ಹೆಂಡತಿ: ಏನು ಹೇಳಲಿ. ನಿಮಗಿರುವ ಅವಕಾಶ ಕೇಳಿ ಬಹಳ ದುಃಖ ಆಗುತ್ತದೆ. ನಿಮಗೆ ದ್ರೌಪದಿ ಗೊತ್ತು ತಾನೆ?

### ನವ ರತ್ನನ ಪದ!

ಕುಡಿಯ ಬೇಕು. ಕುಡಿಯದಂತಿರಬೇಕು.
ಕುಡಿದರೆ?
ತೋಬಾ! ತೋಬಾ!
ಕುಡಿದರೆ ಮಡದಿ ಮೆಚ್ಚುವಂತಿರಬೇಕು!!

# ಸವಿನೆನಪಿನ ಪುಟ ಸೇರಿದ ಸೊಗಸಿನ ದೀಪಾವಳಿಯ ಚಿತ್ರಗಳು











ಛಾಯಾಚಿತ್ರಗಳು: ಶ್ರೀ

# ಸವಿನೆನಪಿನ ಪುಟ ಸೇರಿದ ಸೊಗಸಿನ ದೀಪಾವಳಿಯ ಚಿತ್ರಗಳು
















ಛಾಯಾಚಿತ್ರಗಳು: ಶ್ರೀ

## ಸವಿನೆನಪಿನ ಪುಟ ಸೇರಿದ ಸೊಗಸಿನ ದೀಪಾವಳಿಯ ಚಿತ್ರಗಳು















ಛಾಯಾಚಿತ್ರಗಳು: ಶ್ರೀ

ಪ್ರತಿಯೊಬ್ಬರ ಎದೆಯಲ್ಲೂ ಒಬ್ಬ ಕವಿ ಮಲಗಿದ್ದಾನೆ! ಯಾವುದೋ ಒಂದು ದೃಶ್ಯ, ಒಂದು ಘಟನೆ, ಮನ ಕಲಕುವ ಒಂದು ಭಾವನೆ, ಅಥವಾ ಒಂದು ಶಬ್ದ ಆ ಕವಿಯನ್ನು ಬಡಿದೆಬ್ಬಿಸಬಹುದು! ನಿಮ್ಮೊಳಗೆ ಮಲಗಿರುವ ಕವಿಯನ್ನು ಎಬ್ಬಿಸುವ ಉದಯರಾಗವಾಗಿ ಬಂದಿದೆ ಈ ಆಶು ಕವಿತೆ ಅಂಕಣ. ಈ ಮೊದಲೇ ಸೂಚಿಸಲಾದ ಒಂದು ಪದ ಅಥವಾ ಪದಪುಂಜವನ್ನು ಒಳಗೊಂಡ ಕವಿತೆಯನ್ನು ರಚಿಸಲು ನಿಮಗಿದೊ ಆಹ್ವಾನ!

**"ನಿನ್ನ ನೆನಪು"** ಎಂಬ ಪದಪುಂಜಕ್ಕೆ ಹೊಂದುವ ಕವನಗಳನ್ನು ಕೋರಿದ್ದೆವು. ಅದಕ್ಕೆ ಉತ್ತರವಾಗಿ ಬಂದ ಕವಿತೆಗಳಿವು. ಪದಪುಂಜಕ್ಕೆ ಪ್ರೇರಣೆ ಪದ್ಯ ಬಾಗೇಶ್ರೀ ಅವರದು.



## ನಿನ್ನ ನೆನಪು

**ನಳಿನಿ ಮೈಯ**

ನಿನ್ನ ನೆನಪು ಬೇಡವೆಂದು ಪುಸ್ತಕವ ಬಿಚ್ಚಿ ಓದಿದೆ
ಅಲ್ಲೊಂದು ಕವನದಲಿ ಕಂಡಿತ್ತು ನಿನ್ನ ನೆರಳು

ನಿನ್ನ ನೆನಪು ಬೇಡವೆಂದು ವಾಕಿಂಗ್ ಹೋದೆ
ಅಲ್ಲಿ ಮುಳುಗುತಿರುವ ಸೂರ್ಯನಲ್ಲಿ ಕೆಂಪಾಗಿ
ಕಂಡಿತ್ತು ನಿನ್ನ ತುಟಿಯ ರಂಗು

ನಿನ್ನ ನೆನಪು ಬೇಡವೆಂದು ಸಂಗೀತ ಕೇಳಲು ಕುಳಿತೆ
ಏರಿ ಇಳಿಯುವ ರಾಗದ ಅಲೆಅಲೆಯಲ್ಲಿ ನೀನೆ ಕಂಡೆ

ನೀರಿನಲ್ಲಿ ಮುಳುಗಿದರೆ ಚಳಿ ಹೋಗುವುದೆಂಬ ಗಾದೆಯಂತೆ
ನಿನ್ನ ನೆನಪಿನಲ್ಲಿ ಮುಳುಗಿದರೇನೆ ನನ್ನ ಮನ ಕಳೆವುದು ಚಿಂತೆ

ಬಾ ನೆನಪೇ ಹೊನಲಾಗಿ, ಹಸಿರಾಗಿ, ಉಸಿರಾಗಿ
ತುಂಬು ನನ್ನ ಮನವನ್ನು, ಮನೆಯನ್ನು
ಜೀವದ ಕಣ ಕಣವನ್ನು, ಆತ್ಮದ ಪದರಗಳನ್ನು



## ಪ್ರೇಯಸಿಯ ಕರೆ

**ನೀತಾ ಧನಂಜಯ**

ನಿನ್ನ ನೆನಪು, ಆ ಸವಿನೆನಪು ಬರುತಿದೆ ನನಗೆ
ಹೊಸ ಹರುಷ, ಹೊಸ ಹುರುಪ ತರುತಿದೆ ನನಗೆ
ಸಂಗಾತಿ ಓ ನನ್ನ ಸಂಗಾತಿ

ಮುಂಗಾರಿನ ಮೋಡಗಳ ನಡುವೆ
ಬಯಲುಸೀಮೆಯ ತಂಗಾಳಿಯ ನಡುವೆ
ತೇಲಿಬರುವುದು ನಿನ್ನ ನೆನಪು
ಓ ನನ್ನ ಸಂಗಾತಿ

ಅರಿಸಿನದ ತಂಪಂತೆ
ಗಂಧದ ಕಂಪಂತೆ
ಬಲುಮಧುರ ನಿನ್ನ ನೆನಪು

ಕಗ್ಗತ್ತಿಲಿನ ರಾತ್ರಿಯಲಿ ಬೆಳದಿಂಗಳಾಗಿ
ಸುಡುವ ಮರುಭೂಮಿಯಲಿ ಕಾರಂಜಿಯಾಗಿ
ಆಸರೆ ದೀಪ ನಿನ್ನ ನೆನಪು

ನಿನ್ನೀ ನೆನಪು ಸವಿನೆನಪು
ಮಲ್ಲಿಗೆಯ ಕಂಪು, ಕೋಗಿಲೆಯ ಇಂಪು ನನಗೆ
ಸಂಗಾತಿ ಓ ನನ್ನ ಸಂಗಾತಿ



## ನೆನಪು

**ಬ. ಇಂದುಶೇಖರ್**

ಮರೆತೆ ನಾ ಮರೆತೆಯೆಂದಾಗ
ಇಲ್ಲ ಸಲ್ಲದ ನೆಪವ ಹೂಡಿ
ಮತ್ತೆ ಬರುವುದು
ನಿನ್ನ ನೆನಪು

ಮಾತು ಮೌನವಾಗಿ
ಸದ್ದು ಸಂಗೀತವಾದಾಗ
ಸುಳಿದು ಕಾಡುವ ಹಾಡು
ನಿನ್ನ ನೆನಪು

ಸುಪ್ತಸಾಗರ ಸರಿಸಿ
ಆಪ್ತಸಾಗರ ಅರಸಿದಾಗ
ಗುಪ್ತಗಾಮಿನಿಯಾಗಿ ಹರಿಯುವುದು
ನಿನ್ನ ನೆನಪು

ಬೇಸರದ ಸಂಜೆಯಲಿ
ಬೇಕಿರಲು ನಿನ್ನ ಜೊತೆ
ಭಾವ ಕುಟುಕಲು ಮನದಲಿ
ನಿನ್ನ ನೆನಪು

ಮನದ ಮಾತುಗಳು ಶಬ್ದವಾಗಿ
ಉಮ್ಮಳಿಸಿದ ಭಾವ ಅದುಮಿ
ಮೋಡ ಸರಿದ ಚಂದ್ರನ ಕಂಡಾಗ
ನಿನ್ನ ನೆನಪು



## ನಿನ್ನ ನೆನಪು

**ರವಿ ಮಿಟ್ಟೂರ್**

ನೀ ಎನ್ನ ನೆನೆಗುದಿಯ
ಬಣ್ಣದಾ ಬತ್ತಳಿಕೆಯ ಒಳಗೆ,
ಮಂಜು ಮುಚ್ಚಿದ
ಮುಸುಕಿನಾ ತೆರೆಯ ಕೆಳಗೆ,

ಲಂಗರು ಜಡಿದು ನಿಂತ
ಮನಸಿನಾ ಮಲ್ಲಿಗೆಯಾ
ಮಂದಿರದೊಳಗೆ,
ಹರಿವ ನೀರಿನಾ ಕಲರವಕೆ
ಕಂಪಿಸಿ, ಕವಲೊಡೆವ ಒಡಲೊಳಗೆ,

ನುಸುಳಿ, ಕಲಕಿ, ಮಧುರ
ಮೊಹಕತೆಯ
ಬಿಂಬ, ಚಿಮ್ಮಿಸುವಾ, ನಿನ್ನ ತಲ್ಲಣಕೆ,

ನೆನಪಿನಾ, ಸವಿಗನಸಿನಾ, ತತ್ತರಕೆ
ಒತ್ತರಿಸಿ, ಒರೆವ, ಹೊರೆವ, ಭಾವ
ಚೈತನ್ಯಕೆ,

"ಇದೋ ನನ್ನ ನಮನ"

ನೆನಪೇ ನೀನೇ ಇಲ್ಲದಿರೆ
ನಡೆವುದಿಲ್ಲ ಈ ಜೀವನ ಪಯಣ,
ಆಗುವುದಿಲ್ಲಾ ಈ ಹಿಡಿ,
ಮಿಡಿವ ಕವನ,
ಜೀವ ಭಾವಗಳಾ ತನನನನ........
ನಿನ್ನ ನೆನಪಿನಾ ಗುಣಗಾನ,
ಗಾನಯಾನ.



## ನಿನ್ನ ನೆನಪು

**ಎಸ್. ಬಾಗೇಶ್ರಿ**

ಒಮ್ಮೆ ಕದಡಿದ ಕೊಳವು
ಮತ್ತೆ ತಿಳಿಯಾಗಿರಲು
ತಳದಿ ಮಲಗಿಹ ಕಲ್ಲು
ನಿನ್ನ ನೆನಪು.

ಹೊಗೆ ಹಿಡಿದು ಕರಿಯಾದ
ಸಾಲು ವೃಕ್ಷದ  ತುದಿಯ
ಗಿಳಿಯ ಹಸಿರಿನ ಚಿಗುರು
ನಿನ್ನ ನೆನಪು.

ಮುರಿದು ಬಿದ್ದ ಅರಮನೆಯ
ಮೂಲೆ ಕಂಬದ ಮೇಲೆ
ಬಾಡದ ಕುಸುರಿ ಹೂವು
ನಿನ್ನ ನೆನಪು.

ಶಬ್ದಗಳ ಸರಮಾಲೆ
ಕಟ್ಟಿ ಆರ್ಭಟಿಸುತಿರೆ
ಎಚ್ಚರಿಸೋ ಪಿಸುದನಿಯು
ನಿನ್ನ ನೆನಪು

ಮನಕೆ ಎಟುಕದೆ ಹೋದ
ಕ್ಲಿಷ್ಟ ಕಾವ್ಯದ ನಡುವೆ
ಇಳಿದು ಕಾಡುವ ಹಾಡು
ನಿನ್ನ ನೆನಪು.

ನೂರು ಜನಗಳ ಜೊತೆಗೆ
ನಕ್ಕು ನಲಿದಾಡುತಿರೆ
ಧೂರ್ತನೆರುಗುವ ದುಗುಡ
ನಿನ್ನ ನೆನಪು.



## ನಿನ್ನ ನೆನಪು

**ರಾಜೀವ್ ಕುಮಾರ್**

ಸಪ್ತಸಾಗರದಾಚೆ ನಿರ್ಲಭ್ಯೆ ನೀನು
ನೀರಿಂದ ಹಾರಿಬಿದ್ದ ಮೀನಂತೆ ನಾನು
ಹಗಲಿನಲಿ ನೀ ಮಾಡುತಿರೆ ಖರೀದಿ ಪ್ರಯಾಣ
ಇರುಳಿನಲಿ ನನಗೆ ವಿರಹದ ಮತಿಭ್ರಮಣ

ಗಗನ ಹಕ್ಕಿಯಲಿ ಹಾರುತ್ತ ಬಾರೆ
ವಿಯೋಗದ ಬೇಗೆಯ ಆರಿಸೆ ನೀರೆ
ನೀನ್ಮುಡಿದ ಚೆಂಗುಲಾಬಿಯ ಕೆಂಪು
ತರದೆ ನೊಂದ ನನ್ನೆದೆಗೆ ತಂಪು

ಬಿಟ್ಟು ಹೋಗದಿರು ಇನ್ನೊಮ್ಮೆ ಗೆಳತಿ
ತಾಳಲಾರೆ ಅಗಲಿಕೆಯ ತಳಮಳ ಸ್ಥಿತಿ
ಬಂದುಬಿಡು ನಮ್ಮೂರ ಬೇಗ ತಲುಪು
ಕಾಡುತಿದೆ ಮನಸನ್ನು ನಿನ್ನ ನೆನಪು



## ಬಾಲ್ಯದ ನೆನಪು

**ಕನಕ ತಿರುಮಲೆ**

ನೆನಪಿನಂಗಳದಲ್ಲಿ ಮರುಕಳಿಸಿತ್ತು ಆ ದಿನಗಳು
ನದಿಯ ಝುರಿ, ವನದ ಸಿರಿಯ ನಡುವೆ ಕಳೆದ ಬಾಲ್ಯದ ದಿನಗಳು

ಆಟ–ಒಡನಾಟ, ಸ್ನೇಹಿತರ ನಡುವಿನ ಕಾದಾಟ
ಪರಿವೆಯಿಲ್ಲದೆ ಸಾಗಿತ್ತು ಸಮಯದ ಓಟ

ನಿಷ್ಕಲ್ಮಷ ಮನ, ಚಿಂತೆಯಿಲ್ಲದ ಜೀವ
ಎಲ್ಲಿ ಹೋಯಿತು ಆ ಸಂತಸ–ಸಂತೃಪ್ತಿಯ ಭಾವ?

ಸಮಯವಿಲ್ಲದ ನಾಗಾಲೋಟದ ಬದುಕಿನಲ್ಲಿ
ಹುದುಗಿಹೋಗಿದ್ದೆ ನಾನು ಪ್ರಾಪಂಚಿಕ ಅರಿವಿನಲ್ಲಿ

ಉರುಳಿತ್ತು ಕಾಲ ಚಕ್ರ, ಮತ್ತೆ ಮನ ಕಂಡಿತು ಬಾಲ್ಯದ ಕನಸು
ಮರುಕಳಿಸಿತು ನೆನಪು ಸಜೀವವಾಗಿ ನಮ್ಮ ಮಕ್ಕಳ ಬಾಲ್ಯದಲ್ಲಿ!



**ಇವರು ಯಾರೆಂದು ಗುರುತಿಸಿ.**

ನಿಮ್ಮ ಉತ್ತರವನ್ನು ನಮಗೆ ಕಳುಹಿಸಿ. ಸರಿಯುತ್ತರವನ್ನು ಕಳುಹಿಸಿದವರ ಹೆಸರುಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುತ್ತೇವೆ.

**ಸುಳಿಹು:** ಸಂಗಮ, ಡಿಂಡಿಮ ಸಂಚಿಕೆಗಳಲ್ಲಿ ಇವರ ಭಾವಚಿತ್ರವಿರಬಹುದು?

## ಕಾವ್ಯಸೃಷ್ಟಿ

*...I said, 'A line will take us hours maybe;*
*Yet if it does not seem a moment's thought,*
*Our stitching and unstitching has been naught.*
*Better go down upon your marrow-bones*
*And scrub a kitchen pavement, or break stones*
*Like an old pauper, in all kinds of weather;*
*For to articulate sweet sounds together*
*Is to work harder than all these,*

W.B. Yeats - Adam's Curse

*...ನಾನೆಂದೆ. ಕವಿತೆ ಸಾಲೊಂದನ್ನು ಸಾಧಿಸಲು*
*ಗಂಟೆಗಟ್ಟಲೆ ನಾವು ಹೆಣಗಬೇಕು.*
*ಬೆನ್ನು ಬಗ್ಗಿಸಿ, ಮಂಡಿಯೂರಿ, ಕೊಳೆ ಅಡಿಗೆ ಮನೆ*
*ನೆಲವನ್ನುಜ್ಜುವುದೊ,*
*ಕಡುಭಿಕಾರಿಯ ಹಾಗೆ ಚಳಿ ಬಿಸಿಲು ಎನ್ನದೆ*
*ಕಲ್ಲನ್ನೊಡೆಯುವುದೊ ಇದಕ್ಕಿಂತ ಉತ್ತಮ,*
*ಮಧುರನಾದಗಳ ಹದವಾಗಿ ಹೆಣೆಯುವ ಕೆಲಸ*
*ಎಲ್ಲಕ್ಕಿಂತ ಕಷ್ಟ.*

**– ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ**

**ಮುಂದಿನ ಆಶು ಕವಿತೆ ವಿಭಾಗಕ್ಕೆ ಶೀರ್ಷಿಕೆ**

**“ನಿನಗೆ ನೀನೆ ಗೆಳೆಯ”**

# Call for Articles in SANGAMA Magazine

Established in 1972, Vidyaranya Kannada Kuta promotes social, educational, literary and cultural activities for the Illinois Kannada Community.

Since 1980, Vidyaranya Kannada Kuta has been publishing two or three times a year SANGAMA Magazine that caters to members of Kannada Kuta. Articles from noted Kannada Authors have appeared in our SANGAMA Magazine.

In 2012, SANGAMA will be published in April and November. Editorial Committee invites wide range of articles such as poems, short stories, essays, crosswords, cartoons, translations, artworks, how-to, opinion piece articles on our society and culture.

**Articles Submittal Format:**

- Use Baraha for Kannada and MS Word for English articles.
- Include your Name, Address, Phone number, E-mail and Photo along with your articles.
- Unpublished articles will not be returned.

***Last date for submittal of your articles, photos or advertisement is March 25, 2012 and November 1, 2012***

We request your help by giving advertisements. All expenses for publishing SANGAMA is by your generous support and we thank you for that in advance.

**Advertisement Rates:**

Inside Front Cover: $ 300 Color

Out side Back Cover: $ 500 Color

Inside Back Cover: $ 300 Color

Inside Pages: $ 150 Full B/W,
$ 100 Half B/W,

For additional information, please contact:
sangama @Vidyaranyakannadakuta.org

# ಸಂಗಮ ಸಂಚಿಕೆಯ ಲೇಖನಗಳಿಗೆ ಆಹ್ವಾನ

ವಿದ್ಯಾರಣ್ಯ ಕನ್ನಡ ಕೂಟ ಕನ್ನಡ ಭಾಷೆ, ಸಂಸ್ಕೃತಿಯನ್ನು ಉಳಿಸಿ, ಬೆಳೆಸಿಕೊಂಡುಬರಲು ೧೯೭೨ ರಲ್ಲಿ ಸ್ಥಾಪಿತವಾದ ಸಂಸ್ಥೆ.

೧೯೮೦ ರಿಂದ ವಿದ್ಯಾರಣ್ಯ ಕನ್ನಡಕೂಟ ವರ್ಷಕ್ಕೆ ಎರಡು ಅಥವ ಮೂರು ಸಂಗಮ ಸಂಚಿಕೆ ಪ್ರಕಟಿಸಿ, ಸದಸ್ಯರಿಗೆ ತಲುಪಿಸುತ್ತಿದೆ. ಕನ್ನಡದ ಪ್ರಸಿದ್ಧ ಸಾಹಿತಿಗಳ ಬರಹಗಳು ಸಂಗಮ" ಸಂಚಿಕೆಯಲ್ಲಿ ಪ್ರಕಟವಾಗಿವೆ. ಸ್ಥಳೀಯ ಬರಹಗಾರರು ಬಹಳ ಆಸಕ್ತಿವಹಿಸಿ ಸಂಗಮ ಸಂಚಿಕೆಯ ಪ್ರಗತಿಗೆ ಕಾರಣರಾಗಿದ್ದಾರೆ.

೨೦೧೨ರಲ್ಲಿ ಸಂಗಮ ಸಂಚಿಕೆಗಳು ಏಪ್ರಿಲ್ ಮತ್ತು ನವೆಂಬರ್‌ನಲ್ಲಿ ಪ್ರಕಟವಾಗಲಿವೆ. ಸಣ್ಣಕಥೆ, ಕಾವ್ಯ, ಪದರಂಗ, ಪ್ರಬಂದ, ಅನುವಾದ, ಕಲೆ, ಸಂಸ್ಕೃತಿ ಮತ್ತು ಸಮಾಜದ ಬಗ್ಗೆ ನಿಮ್ಮ ಅನಿಸಿಕೆ ಮುಂತಾದ ವಿವಿದ ರೀತಿಯ ನಿಮ್ಮ ಲೇಖನಗಳನ್ನು ಸಂಪಾದಕ ಮಂಡಲಿ ಆಹ್ವಾನಿಸುತ್ತಿದೆ.

**ಲೇಖನಗಳನ್ನು ತಯಾರಿಸುವ ರೀತಿ:**

- ಕನ್ನಡ ಲೇಖನಗಳಿಗೆ ಬರಹ ಉಪಯೋಗಿಸಿ. ಇಂಗ್ಲಿಷ್ ಲೇಖನಗಳಿಗೆ ಮೈಕ್ರೊಸಾಫ್ಟ್ ವರ್ಡ್ ಉಪಯೋಗಿಸಿ.
- ಲೇಖನದ ಜೊತೆ ನಿಮ್ಮ ಹೆಸರು, ವಿಳಾಸ, ದೂರವಾಣಿ ಸಂಖ್ಯೆ, ಇ-ವಿಳಾಸ, ಭಾವಚಿತ್ರ ಕಳುಹಿಸುವುದನ್ನು ಮರೆಯಬೇಡಿ.
- ಅಪ್ರಕಟಿತ ಲೇಖನಗಳನ್ನು ಹಿಂತಿರುಗಿಸುವುದಿಲ್ಲ,

***ಲೇಖನ, ಭಾವಚಿತ್ರ, ಜಾಹೀರಾತುಗಳಿಗೆ ಕೊನೆಯದಿನ: ಮಾರ್ಚ್ ೨೫, ೨೦೧೨ ಮತ್ತು ನವೆಂಬರ್ ೧, ೨೦೧೨.***

ಸಂಗಮ ಸಂಚಿಕೆಗೆ ಜಾಹೀರಾತುಗಳನ್ನು ಕೊಟ್ಟು ಸಹಾಯಮಾಡಿ. ಸಂಗಮದ ಎಲ್ಲಾ ಖರ್ಚು-ವೆಚ್ಚ ನಿಮ್ಮ ಉದಾರ ಕಾಣಿಕೆಯಿಂದ. ಅದಕ್ಕಾಗಿ ನಿಮಗೆ ನಮ್ಮ ಮುಂಗಡ ವಂದನೆಗಳು.

**ಜಾಹೀರಾತು ದರ:**

ಮುಂದಿನ ಮುಖಪುಟ (ಒಳಗಡೆ): ಬಣ್ಣ ೩೦೦ ಡಾಲರ್

ಹಿಂದಿನ ಮುಖಪುಟ (ಹೊರಗಡೆ): ಬಣ್ಣ ೫೦೦ ಡಾಲರ್

ಹಿಂದಿನ ಮುಖಪುಟ (ಒಳಗಡೆ): ಬಣ್ಣ ೩೦೦ ಡಾಲರ್

ಒಳಗಡೆಯ ಪುಟಗಳು (ಕಪ್ಪು-ಬಿಳುಪು): ಪೂರ್ತಿ ಪುಟ ೧೫೦,
ಅರ್ಧಪುಟ ೧೦೦,

ಹೆಚ್ಚಿನ ವಿವರಗಳಿಗೆ ದಯವಿಟ್ಟು ಸಂಪರ್ಕಿಸಿ:
sangama @Vidyaranyakannadakuta.org

## ಆದದ್ದೆಲ್ಲ ಒಳಿತೆ ಆಯಿತು

**ಶ್ರೀನಿವಾಸ ನಾಯಕ (ಪುರಂದರ ದಾಸರು)**

ಆದದ್ದೆಲ್ಲ ಒಳಿತೆ ಆಯಿತು ನಮ್ಮ ।
ಶ್ರೀಧರನ ಸೇವೆಗೆ ಸಾಧನ ಸಂಪತ್ತಾಯಿತು ॥ಪಲ್ಲವಿ॥

ದಂಡಿಗೆ ಬೆತ್ತ ಹಿಡಿಯುವುದಕ್ಕೆ
ಮಂಡೆ ಮಾಚಿ ನಾಚುತಿದ್ದೆ ।
ಹೆಂಡತಿ ಸಂತತಿ ಸಾವಿರವಾಗಲಿ
ದಂಡಿಗೆ ಬೆತ್ತ ಹಿಡಿಸಿದಳಯ್ಯ ॥ಪಲ್ಲವಿ॥

ಗೋಪಾಳ ಬುಟ್ಟಿ ಹಿಡಿಯುವುದಕ್ಕೆ
ಭೂಪತಿಯಂತೆ ಗರ್ವಿಸುತಿದ್ದೆ ।
ಆ ಪತ್ನೀ ಕುಲ ಸಾವಿರವಾಗಲಿ
ಗೋಪಾಳ ಬುಟ್ಟಿ ಹಿಡಿಸಿದಳಯ್ಯ ॥ಪಲ್ಲವಿ॥

ತುಳಸಿ ಮಾಲೆಯ ಹಾಕುವುದಕ್ಕೆ
ಅರಸನಾಗಿ ನಾಚುತಿದ್ದೆ ।
ಸರಸಿಜಾಕ್ಷ ಪುರಂದರ ವಿಠಲನು
ತುಳಸಿ ಮಾಲೆ ಹಾಕಿಸಿದನಯ್ಯ ॥ಪಲ್ಲವಿ॥

.



## ನನ್ನೀಪಾಪದ ಕೊಳಚೆಯಲಿ

**ನಾಗಭೂಷಣ ಮೂಲ್ಕಿ**

ನನ್ನೀಪಾಪದ ಕೊಳಚೆಯಲಿ
ಭಕ್ತಿ ಅಮಲಕಮಲವ ಅರಳಿಸಿ
ಕಮಲವಾಸಿನಿ ಸುವಾಸಿನಿ
ಆನಂದಮಯಿ ನನ್ನನುದ್ಧರಿಸು

ನಂಜಿನ ಮಂಜಲಿ
ಅಂಜುವ ಮನದಲಿ
ಕಾರ್ಯ ಕರ್ಮದಲಿ
ಜೀವ ಧರ್ಮ ಹೀನವು

ಜಗಿಯುವ ವಿಷಯದಲಿ
ಮುಗಿಯದ ತೃಷೆಯಲಿ
ಜೀವನ ಕೊಳೆಯಿತು
ಮಾನವು ಅಳಿಯಿತು

ಅರ್ಪಿಸಿ ಸಮರ್ಪಿಸಿ
ಧ್ಯಾನದಿ ಸಂಪರ್ಕಿಸಿ
ಸಂತಸದಿ ಸಂತೈಸು
ಸಂತೃಪ್ತಿಯ ಪಾಲಿಸು

## Modern Quotes

- History retweets itself
- Give hashtag where hashtag is due
- Every day is a Monday except Saturday and Sunday
- Accents speak louder than words
- The leopard cannot change his spots, unless Photoshop is involved
- Love thy neighbor's Wifi connection
- I m in a good shape. Round is a shape
- If at first you don't succeed, press F1 to go to the 'Help' menu
- Tweet others the way you want to be tweeted.
- Roaming was not billed in a day
- Life will give you many challenges. Much of which can be outsourced to Bengaluru.

## ಕೆಲವು ಉಪಯುಕ್ತ ತಾಣಗಳು:

- ನಿಮಗೆ ಕರ್ನಾಟಕ ಸಂಗೀತ ಕಲಿಯಲು ಆಸಕ್ತಿ ಇದೆಯೆ? ಹಾಗಿದ್ದರೆ e-ಸಂಗೀತ ಕಲಿಯಲು ಈ ತಾಣವನ್ನು ನೋಡಿ.
  http://www.carnaticstudent.org
- ನಿಮ್ಮ ಅಮೆರಿಕನ್ನಡದ ಕೂಸು *Mother* ಪದಕ್ಕೆ ಕನ್ನಡದಲ್ಲಿ ಏನು ಹೇಳುತ್ತಾರೆಂದು ಕೇಳಿದಾಗ ಅದು ಮಾಮ್ ಅಥವಾ ಮಮ್ಮಿ ಇರಬೇಕೆಂಬ ಗೊಂದಲಕ್ಕೆ ಸಿಲುಕುವುದು ಬೇಡ. ೧೮೯೪ ರಲ್ಲಿ ಪ್ರಕಟವಾಗಿದ್ದ ರೆ. ಫ. ಕಿಟ್ಟೆಲ್ ಅವರ ಕನ್ನಡ-ಇಂಗ್ಲಿಷ್ ಶಾಲಾ ನಿಘಂಟಿನ ನಿಮ್ಮದೇ ಪ್ರತಿಯನ್ನು ಇಲ್ಲಿಂದ ಇಳಿಗಿಳಿಸಿ ಬಳಸಿ ನೋಡಬಹುದು.
  http://www.archive.org/details/kannadaenglishsc00buchrich
- ಕನ್ನಡ ಜಗತ್ತಿನ ಬಗ್ಗೆ ಓದ ಬಯಸಿದರೆ ನೀವು ಈ ತಾಣವನ್ನು ನೋಡಿ. ಕನ್ನಡ ಓದಲು ಬರುವುದಿಲ್ಲವೇ? ತೊಂದರೆಯಿಲ್ಲ. ಈ ಮಾತು ಬಳಸಿ ಕಣಜವನ್ನು ಕನ್ನಡದಲ್ಲಿ ಕೇಳಬಹುದು!
  http://kanaja.in/
- ವಿದ್ಯಾರಣ್ಯ ಕನ್ನಡ ಕೂಟದ ಸದಸ್ಯರಾಗವುದು ಹೇಗೆ? ಯಾರನ್ನೂ ಕೇಳಬೇಕು? ಚಿಂತಿಸಬೇಡಿ. ಇಲ್ಲಿ ಚಿಟಕಿಸಿ.
  http://www.vidyaranyakannadakuta.org/



## ಲಕ್ಷ್ಮಣ್ ಮಿಟ್ಟೂರ್

### ಲೆಮಾಂಟ್ ಗುಡಿಯ ನೂತನ ಧರ್ಮದರ್ಶಿ

ವಿದ್ಯಾರಣ್ಯ ಕನ್ನಡ ಕೂಟದ ಸದಸ್ಯ, ಹವ್ಯಾಸಿ ನಾಟಕಕಾರ, ಕವಿ ಲಕ್ಷ್ಮಣ್ ಮಿಟ್ಟೂರ್ ಅವರು ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಲೆಮಾಂಟ್ ಗುಡಿಯ ಧರ್ಮದರ್ಶಿಗಳಾಗಿ ಆಯ್ಕೆಯಾಗಿದ್ದಾರೆ. ಅವರಿಗೆ ಕನ್ನಡ ಕೂಟದ ಪರವಾಗಿ ಶುಭಾಶಯಗಳು.

ಸ್ವರ್ಗವೆ ಭೂಮಿಯೊಳಿರದಿರೆ ನೀನು ಮೇಲೆಲ್ಲಿಯು ಇಲ್ಲ
ದೇವತೆಗಳು ನಾವಾಗಲಾರದಿರೆ ದೇವತೆಗಳು ಇಲ್ಲ
ಅಪ್ಸರೆಯರು ನಾವಾಗಲಾರದಿರೆ ಅಪ್ಸರೆಯರು ಬೇರಿಲ್ಲ
ಮೊರೆ ಮೊರೆಯುತ ಓಡುವ ಈ ತೊರೆಯಿದೆ
ತೆರೆಗಳ ತುದಿಯಲಿ ತಿರುಗುವ ನೊರೆಯಿದೆ
ಹಸುರು ಬನಗಳಲಿ ಹೂ ಬಿಸಿಲೊಳಗಿದೆ
ಕೋಮಲ ರವಿಯಿದೆ ನಾಕವು ನೀ ಕರೆ
ಸುಗ್ಗಿಯ ಸೊಬಗಲಿ ತಿಂಗಳ ಬೆಳಕಲಿ
ಸಗ್ಗವು ಬಿದ್ದಿರುವುದು ಅಲ್ಲಲ್ಲಿ
ಕಬ್ಬಿಗರಿಂಚರ ಸೊನೆಯೊಂದು ಚಲ್ಲಿ
ಸಗ್ಗವ ಮಾಳ್ಪನು ಈ ಭುವಿಯಲ್ಲಿ

– ಕುವೆಂಪು

## ಮಕ್ಕಳ ಸಂಭ್ರಮ



### ಸಫ್ಹಿನ ಪ್ರಿಯ ಜುಲಿಯಾನೊ

ಕನ್ನಡ ಕೂಟದ ಸದಸ್ಯರಾದ ರಮಾ ಮತ್ತು ಮೋಹನ್ ರಾವ್ ಅವರಿಗೆ ಇತ್ತೀಚೆಗೆ ಸಂತಸ ಇಮ್ಮಡಿ ಮಾಡಲು ಮೊಮ್ಮಗಳು ಸಫ್ಹಿನ ಆಗಮಿಸಿದ್ದಾಳೆಂದು ತಿಳಿಸಿದ್ದಾರೆ.

ಸಫ್ಹಿನ, ಶ್ರೇಯ, ಸ್ಮಿತ, ಟಾಂ
ಮತ್ತು
ತಾತ–ಅಜ್ಜಿಗೆ
ಶುಭಾಶಯಗಳು.



### ಲೀನ ಸುಂಸ್ಕಿ

ಕನ್ನಡ ಕೂಟದ ಸದಸ್ಯರಾದ ಪ್ರೇಮ ಮತ್ತು ನಂಜುಂಡ ಗೌಡ ಅವರಿಗೆ ಇತ್ತೀಚೆಗೆ ಮೊಮ್ಮಗಳು ಲೀನ ಆಗಮಿಸಿದ್ದಾಳೆಂದು ತಿಳಿಸಿದ್ದಾರೆ. ಮನೆಯಲ್ಲಿ ಅಜ್ಜಿಗೆ ಕೆಲಸಕ್ಕೆ ಹೋಗಿಬರುತ್ತೇನೆಂದು ಹೇಳಿ ಮೊಮ್ಮಗಳ ಜೊತೆ ತಾತ ಸಮಯ ಕಳೆಯುತ್ತಿದ್ದಾರೆಂದು ವದಂತಿ ಬಂದಿದೆ.

ಲೀನ, ಶಿಲ್ಪ, ಜಾಶ್ವ
ಮತ್ತು
ತಾತ–ಅಜ್ಜಿಗೆ
ಶುಭಾಶಯಗಳು.



### ಅನ್ವಿ ಕಲ್ಕುಂಟೆ

ಡಿಂಡಿಮದ ತಮ್ಮ ಸಂಪಾದಕಿಯ ಸ್ಥಾನ ತೆರವಾದರೆ ಆ ಸ್ಥಾನದಲ್ಲಿ ನೆಲೆಗೊಳಿಸಲು ಮುಂದಾಲೋಚಿಸಿ ಡಿಂಡಿಮದ ಸಂಪಾದಕಿ ಕನಕ ತಿರುಮಲೆ ಮತ್ತು ಆದಿತ್ಯ ಕಲ್ಕುಂಟೆಯವರ ಸಂಯೋಜನೆ "ಅನ್ವಿ" ಕಳೆದ ಆಗಷ್ಟ್ ೧೨ ರಂದು ಬೆಳಗ್ಗೆ ೧:೦೫ ಕ್ಕೆ ಹೆಮ್ಮೆಯಿಂದ ಬಂದಳೆಂದು ತಿಳಿದು ಬಂದಿದೆ. ಡಿಂಡಿಮ ತಡವಾಗಿ ಬರಲು ಕಾರಣ ಈ ನೂತನ ಸಂಪಾದಕಿಯೇ ಇರಬೇಕೆಂಬ ಕುಹಕಿಗಳ ಹೇಳಿಕೆಗೆ ಹುರುಳಿಲ್ಲೆಂದು ಮೇಲಿನ ಮುದ್ದಾದ ಚಿತ್ರ ನೋಡಿದ ಕೂಡಲೆ ತಿಳಿಯುತ್ತದೆಂದು ಡಿಂಡಿಮ ಸಾರುತ್ತಿದೆ!

ಅನ್ವಿ, ಕನಕ ಮತ್ತು ಆದಿತ್ಯ ಅವರಿಗೆ
ಶುಭಾಶಯಗಳು.

# Photo Feature

The photo feature theme for this issue was ***"ಎಂತ ಹಬ್ಬ!"*** *'What a Festival!'*.

The caption for the next photo feature is *'I took this photo. Photoshop not involved !'*
***"ನಾನೆ ತೆಗೆದ ಚಿತ್ರ. ಫೋಟೋಶಾಪ್ ಬಳಸಿಲ್ಲ"***



ಗಣೇಶ ಹಬ್ಬದ ಚಿತ್ರ: ಶ್ರೀನಿವಾಸರಾವ್




ನವರಾತ್ರಿ ಹಬ್ಬದ ಚಿತ್ರಗಳು: ಆಶ ಅಶೋಕ್









## National Youth Day

**National Youth Day** is celebrated in India on 12 January on the birthday of Swami Vivekananda. In 1984, the Government of India declared and decided to observe the birthday of Swami Vivekananda (12 January, according to the English calendar) as a National Youth Day every year from 1985 onwards. To quote from the Government of India's communication, 'it was felt that the philosophy of Swamiji and the ideals for which he lived and worked could be a great source of inspiration for the Indian Youth.'



**Swami Vivekananda**
January 12, 1863 – July 4, 1902

- If money help a man to do good to others, it is of some value; but if not, it is simply a mass of evil, and the sooner it is got rid of, the better.
- When an idea exclusively occupies the mind, it is transformed into an actual physical or mental state.
- Where can we go to find God if we cannot see Him in our own hearts and in every living being.
- You cannot believe in God until you believe in yourself.
- You have to grow from the inside out. None can teach you, none can make you spiritual. There is no other teacher but your own soul.
- Take up one idea. Make that one idea your life - think of it, dream of it, live on that idea. Let the brain, muscles, nerves, every part of your body, be full of that idea, and just leave every other idea alone. This is the way to success, that is way great spiritual giants are produced.

## ತಾಯಿ ಗುಬ್ಬಿ ಮರಿ ಗುಬ್ಬಿ ಸಂವಾದ

**ಎಚ್. ಎಸ್. ವೆಂಕಟೇಶಮೂರ್ತಿ**



ಗುಬ್ಬಿ ಮರಿ ಪುರ್ ಪುರ್ರಂತ
ಹಾರಿ ಬಂತು ಅಮ್ಮನ ಹತ್ರ

ಅಮ್ಮ ಅಮ್ಮ ಗೋಪುರದ್ಮೇಲೆ
ಮರಿ ಪಾರ್ರಿವಾಳ ಕೂತ್ಕೊಂಡಿತ್ತೆ!
ಮಾತಾಡಿಸ್ತೆ! ರೆಕ್ಕೆ ಬಿಚ್ತೆ!
ಎಂಥ ಬಣ್ಣ, ರೆಕ್ಕೆ ಮೇಲೆ.

ಅದೂ ಕೂಡ ನಮ್ಮ ಥರಾನೆ
ನಮ್ಮ ಹಾಗೇನೆ ಕೊಕ್ಕು ರೆಕ್ಕೆ
ಆದರೆ ಅಮ್ಮ ಅದಾಕ್ಯಾತಕ್ಕೆ
ಅಂಥ ಚಂದ ಬಣ್ಣ?



ಅಮ್ಮ ಗುಬ್ಬಿ ಸಣ್ಣಗೆ ನಕ್ತು
ಕೊಕ್ಕನು ಮರಿಯ ಗದ್ದಕೆ ತಿಕ್ತು
ನೋಡು ಪುಟ್ಟಾ, ನೀನೂ ಹಾಗೆ
ಇದ್ದೀ ಅಂತ್ಕೊ ಏನಾಗ್ತಿತ್ತು?



ನಿನ್ ತೊಟ್ಲಲ್ಲಿ ಮರಿ ಪಾರಿವಾಳ
ತಾನೇ ಬಂದು ಮಲಕ್ಕೊಂಡು ಬಿಟ್ರೆ?
ನಿಮ್ಮಪ್ಪಾಜಿ ಅದರ ಕೊಕ್ಕಲ್ಲೆ
ಹಾರ್ಕೊಂಬಂದು ತಿಂಡಿ ಇಟ್ರೆ?

ನೀನೇ ಅದು ಅಂತಂದ್ಕೊಂಡು
ನಾನು ಅದಕ್ಕೆ ಮುತ್ತು ಗಿತ್ತು ಕೊಟ್ರೆ?
ಹೌದಲ್ಲಪ್ಪ ಅಂತ ಗುಬ್ಬಿ
ಚಿವ್ ಚಿವ್ ಮಾಡಿ ಕಣ್ ಕಣ್ ಬಿಡ್ತು

ನಾನು ನನ್ಹಾಗೆ ಇರ್ಬೇಕಪ್ಪ
ನಾನು ನಾನೆ ಅಂತ ನಮ್ಮ
ಅಪ್ಪ ಅಮ್ಮಂಗೆ ತಿಳೀಬೇಕಪ್ಪ
ಕನ್ನಡಿ ಗಿನ್ನಡಿ ನೋಡೊಂಡಾಗ



ನನ್ನ ಮುಖಾನೇ ಉಳಿಬೇಕಪ್ಪ!